

# ಮಹಿಳಾಪರ ಕಾನೂನು

## ನಿಮಗೆಷ್ಟು ಗೊತ್ತು?

ಮಹಿಳೆಯನ್ನು ದೇವತೆಯಾಗಿ ಪೂಜಿಸುವುದಕ್ಕೆ ಇರುವಷ್ಟೇ ಇತಿಹಾಸ ಅವಳ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯಕ್ಕೂ ಇದೆ. ದೇಗುಲದಲ್ಲಿನ ದೇವಿಯ ಪ್ರತಿಮೆಗೆ ಭಕ್ತಿಯಿಂದ ಕೈ ಮುಗಿಯುತ್ತಲೇ ಮನೆಯಲ್ಲಿನ ಜೀವಂತ ಹೆಣ್ಣನ್ನು ಶಿಲೆಯ ಸಮಾನವಾಗಿ ನಡೆಸಿಕೊಳ್ಳುವುದು ಅನುದಿನ ಘಟಿಸುತ್ತಲೇ ಇರುವ ವಿದ್ಯಮಾನ. ಸಮಾಜ ಭೌತಿಕವಾಗಿ ಎಷ್ಟೇ ಆಧುನಿಕಗೊಂಡರೂ, ಪುರುಷ ಮನಸ್ಸು ಹೆಣ್ಣನ್ನು ಇನ್ನೂ ತನ್ನ ಸಮಸಮನಾಗಿ ಕಾಣುವುದಕ್ಕೆ ಸಜ್ಜುಗೊಂಡಿಲ್ಲ. ಹಾಗೆ ನೋಡಿದರೆ ಈಗ ವಿಮೋಚನೆಗೊಳ್ಳಬೇಕಾಗಿರುವುದು ಸ್ತ್ರೀಯರಲ್ಲ; ಅವರನ್ನು ಹೀನವಾಗಿ ಕಾಣುವ, ನಡೆಸಿಕೊಳ್ಳುವ ಪುರುಷಮನಸ್ಸುಗಳು. ಅಪರಾಧ ನಿಯಂತ್ರಣಕ್ಕೆ ಶಿಕ್ಷೆಯ ಭಯವೇ ಕಾರಣವಾಗುವುದು ಯಾವ ನಾಗರಿಕ ಸಮಾಜಕ್ಕೂ ಹೆಮ್ಮೆಯ ಸಂಗತಿ ಅಲ್ಲ. ಅದು ವಿವೇಕದ ಕುಂದು. ಆದರೆ ಆ ಕುಂದನ್ನು ನಮ್ಮ ಸಮಾಜ ಇನ್ನೂ ಚರ್ಮಕ್ಕಂಟಿದ ಮಚ್ಚೆಯಷ್ಟೇ ಸಹಜವಾಗಿ ಒಪ್ಪಿಕೊಂಡಿರುವುದರಿಂದ ಕಾನೂನಿನ ಅಂಕುಶ ಅನಿವಾರ್ಯವಾಗಿದೆ. ಮಹಿಳೆಯ ಹಕ್ಕುಗಳ ರಕ್ಷಣೆಗೂ ಕಾನೂನುಗಳ ಬೆಂಬಲವಿದೆ. ಆದರೆ ಅಂಥ ಕಾನೂನುಗಳ ಬಗ್ಗೆ ನಮಗೆಷ್ಟು ತಿಳಿದಿದೆ? ದೌರ್ಜನ್ಯವೆಂಬುದರ ವ್ಯಾಖ್ಯಾನವೇನು? ಅದನ್ನು ಕಾನೂನಾತ್ಮಕವಾಗಿ ಎದುರಿಸುವುದು ಹೇಗೆ – ಈ ಕುರಿತ ಪರಿಚಯಾತ್ಮಕ ಲೇಖನ ಇಲ್ಲಿದೆ.

**ಇದು ಜನವರಿ 26ರ ಗಣರಾಜ್ಯೋತ್ಸವ ವಿಶೇಷ**

■ ಸೌಮ್ಯಲಕ್ಷ್ಮೀ ಭಟ್